# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

### ಎಸ್.ಸಿ. ನಂ. 22/2021

**ದೋ.ಸಾ. :34 ಫ್ರಾ.ಸಾ. :15**

| | | |
|---|---|---|
| ಸಾಕ್ಷಿಯ ಹೆಸರು | : | ಕೃಷ್ಣಾ ಡಿ ಗೌಡ |
| ತಂದೆಯ ಹೆಸರು | : | ದೇವು ಗೌಡ |
| ವಯಸ್ಸು | : | 49 ವರ್ಷ |
| ಕೆಲಸ | : | ಸಿ.ಹೆಚ್.ಸಿ–574, ಡಿ.ವೈ.ಎಸ್.ಪಿ. ಕಚೇರಿ, ಭಟ್ಕಳ |
| ವಾಸ | : | ಭಟ್ಕಳ |

**ದಿನಾಂಕಃ 24–11–2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ–**

1. 2017 ರಿಂದ 2023 ರವರೆಗೆ ನಾನು ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನನಗೆ ಇಲಾಖಾ ವತಿಯಿಂದ ಡಿಜಿಟಲ್ ಕ್ಯಾಮೆರಾಗಳನ್ನು ಬಳಸಿ, ಫೋಟೊ ತೆಗೆಯುವ, ವೀಡಿಯೋ ಮಾಡುವ ಹಾಗೂ ಕಂಪ್ಯೂಟರ್ ಬಳಸುವ ತರಬೇತಿಯನ್ನು ನೀಡಲಾಗಿರುತ್ತದೆ ಹಾಗೂ ಈ ಬಗ್ಗೆ ನಮ್ಮ ಸೇವಾ ಪುಸ್ತಕದಲ್ಲಿ ದಾಖಲಾಗಿರುತ್ತದೆ. ನಾನು ಕ್ಯಾಮೆರಾಗಳನ್ನು ಮತ್ತು ಕಂಪ್ಯೂಟರುಗಳನ್ನು ಬಳಸುವ ಜ್ಞಾನ ಹೊಂದಿರುತ್ತೇನೆ.

2. ದಿ. 03–05–2021 ರಂದು ತನಿಖಾಧಿಕಾರಿಯಾದ ಚಾಸಾ–39 ರವರು ನನಗೆ ಕುಮಟಾದ ಸರಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಈ ಪ್ರಕರಣದ ಮೃತನ ಶವ ಪಂಚನಾಮೆಯ ಕಾಲಕ್ಕೆ ಹಾಜರಿದ್ದು, ಫೋಟೊ ತೆಗೆಯುವಂತೆ ಸೂಚಿಸಿದ ಮೇರೆಗೆ ನಾನು ಠಾಣೆಯ ಕ್ಯಾಮೆರಾದಿಂದ ಶವ ಪಂಚನಾಮೆ ಫೋಟೊ ತೆಗೆದಿರುತ್ತೇನೆ. ಅದೇ ದಿನ, ತನಿಖಾಧಿಕಾರಿಯಾದ ಚಾಸಾ–39 ರವರು ಈ ಪ್ರರಕಣದ ಘಟನಾ ಸ್ಥಳವಾದ ಚಂದಾವರ ಗ್ರಾಮದ ಜನತಾ ಕಾಲೋನಿಯ ಚಾಸಾ–14 ರವರ ಮನೆಯ ಮುಂದೆ ಮಣ್ಣಿನ ರಸ್ತೆಯಲ್ಲಿ

ಪಂಚನಾಮೆ ಮಾಡುವ ಕಾಲಕ್ಕೆ ಹಾಜರಿದ್ದು, ಅವರು ಸೂಚಿಸಿದಂತೆ ಠಾಣೆಯ ಕ್ಯಾಮೆರಾದಿಂದ ಫೋಟೊ ತೆಗೆದಿರುತ್ತೇನೆ.

3. ನಂತರ ಅದೇ ದಿನ ತನಿಖಾಧಿಕಾರಿಯು ಹೊನ್ನಾವರದ ವೃತ್ತ ಕಚೇರಿಯಲ್ಲಿ ಆರೋಪಿಯ ಶರ್ಟ್ ಜಪ್ತುಪಡಿಸುವ ಕಾಲಕ್ಕೆ ನನಗೆ ಫೋಟೊ ತೆಗೆಯುವಂತೆ ಸೂಚಿಸಿದ ಮೇರೆಗೆ, ಠಾಣೆಯ ಕ್ಯಾಮೆರಾದಿಂದ ಫೋಟೊ ತೆಗೆದಿರುತ್ತೇನೆ. ಆನಂತರ ಮೇಲೆ ಹೇಳಿದ ಮೂರೂ ಸ್ಥಳಗಳಲ್ಲಿ ತೆಗೆದ ಫೋಟೊಗಳನ್ನು ಠಾಣೆಯ ಕಂಪ್ಯೂಟರಿಗೆ ವರ್ಗಾಯಿಸಿ ನಂತರ ಅವುಗಳನ್ನು ಡಿ.ವಿ.ಡಿ.ಗೆ ಭರಣ ಮಾಡಿ, ಆನಂತರ ಅವುಗಳನ್ನು ಹೊನ್ನಾವರದ ಶ್ರೀರಾಮ ಸ್ಟೂಡಿಯೋದಲ್ಲಿ ಪ್ರಿಂಟ್ ಮಾಡಿಸಿ, ಫೋಟೊಗಳನ್ನು ಹಾಗೂ ಡಿ.ವಿ.ಡಿಯನ್ನು 65–ಬಿ ಪ್ರಮಾಣ ಪತ್ರದೊಂದಿಗೆ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. 65–ಬಿ ಪ್ರಮಾಣ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–55 ಎಂದು, ಸಾಕ್ಷಿಯ ಸಹಿಯನ್ನು ನಿಪಿ–55(ಎ) ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಕಾಲಕ್ಕೆ ತೆಗೆದ 4 ಫೋಟೊಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ–11 ರಿಂದ 14 ಎಂದು ಗುರುತಿಸಲಾಗಿದ್ದು, ಅದಕ್ಕೆ ಸಂಬಂಧಿಸಿದ ಡಿ.ವಿ.ಡಿ. ಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–56 ಎಂದು ಗುರುತಿಸಲಾಯಿತು. ಘಟನಾ ಸ್ಥಳದಲ್ಲಿ ತೆಗೆದ ಫೋಟೊಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ–33 ಮತ್ತು 34 ಎಂದು ಗುರುತಿಸಲಾಗಿದ್ದು, ಅದಕ್ಕೆ ಸಂಬಂಧಿಸಿದ ಡಿ.ವಿ.ಡಿ. ಯನ್ನು ನಿಪಿ–57 ಎಂದು ಗುರುತಿಸಲಾಯಿತು. ಆರೋಪಿಯ ಶರ್ಟ್ ಜಪ್ತುಪಡಿಸುವ ಕಾಲಕ್ಕೆ ತೆಗೆದ ಫೋಟೊಗಳನ್ನು ನೋಡಿ ಸಾಕ್ಷಿಯು ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದ್ದು, ಅದಕ್ಕೆ ಸಂಬಂಧಿಸಿದ ಡಿ.ವಿ.ಡಿ ಯನ್ನು ನಿಪಿ–58 ಎಂದು ಗುರುತಿಸಲಾಯಿತು.

4. ಮರುದಿನ ಅಂದರೆ, ದಿ.04–05–2021 ರಂದು ಆರೋಪಿಯು ತಾನು ಕೃತ್ಯಕ್ಕೆ ಬಳಸಿದ ಚಾಕುವನ್ನು ಹಾಗೂ ಘಟನೆಯ ಕಾಲಕ್ಕೆ ತಾನು ಧರಿಸಿದ ಲುಂಗಿ ಇವುಗಳನ್ನು ಚಂದಾವರದ ಸೇತುವೆಯ ಕೆಳಗೆ ಇಟ್ಟಿರುವುದಾಗಿ ಹೇಳಿದ್ದು, ತನಿಖಾಧಿಕಾರಿಯು ಅವುಗಳನ್ನು ಜಪ್ತುಪಡಿಸವ ಕಾಲಕ್ಕೆ ತನಿಖಾಧಿಕಾರಿಯ ಸೂಚನೆಯಂತೆ ಠಾಣೆಯ ಕ್ಯಾಮೆರಾದಿಂದ ಫೋಟೊಗಳನ್ನು ತೆಗೆದಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಅಂಜುಂ ಚಾಸಾ–15 ರವರು

ಚಾಸಾ-14 ರವರ ಮನೆಯಲ್ಲಿ ಬಟ್ಟೆ ತೊಳೆಯುತ್ತಿದ್ದಾಗ, ಆರೋಪಿಯು ತನ್ನ ಲುಂಗಿಯನ್ನು ಎತ್ತಿ ತೋರಿಸಿ, ಅಸಭ್ಯವಾಗಿ ವರ್ತಿಸಿದ ಸ್ಥಳ ಎಂದು ತೋರಿಸಿದ ಮೇರೆಗೆ ತನಿಖಾಧಿಕಾರಿಯು ಸದರಿ ಸ್ಥಳದಲ್ಲಿ ಪಂಚನಾಮೆ ಮಾಡುವ ಕಾಲಕ್ಕೆ ಅವರು ಸೂಚಿಸಿದ ಮೇರೆಗೆ ಠಾಣೆಯ ಕ್ಯಾಮೆರಾದಿಂದ ಫೋಟೊ ತೆಗೆದಿರುತ್ತೇನೆ. ಅದೇ ದಿನ, ಹೊನ್ನಾವರದ ಪೊಲೀಸ್ ವೃತ್ತ ಕಚೇರಿಯಲ್ಲಿ ಮೃತನ ಮರಣೋತ್ತರ ಪರೀಕ್ಷೆಯ ನಂತರ ಚಾಸಾ-35 ರವರು ಮೃತನ ಬಟ್ಟೆಗಳನ್ನು ತಂದು ಹಾಜರುಪಡಿಸಿದ್ದು, ಅವುಗಳನ್ನು ಜಪ್ತುಪಡಿಸಿಕೊಳ್ಳುವ ಕಾಲಕ್ಕೆ ಠಾಣೆಯ ಕ್ಯಾಮೆರಾದಿಂದ ಫೋಟೊ ತೆಗೆದಿರುತ್ತೇನೆ.

5. ಆನಂತರ ಮೇಲೆ ಹೇಳಿದಂತೆ ತೆಗೆದ ಎಲ್ಲಾ ಫೋಟೊಗಳನ್ನು ಠಾಣೆಯ ಕಂಪ್ಯೂಟರಿಗೆ ವರ್ಗಾಯಿಸಿ ನಂತರ ಅವುಗಳನ್ನು ಡಿ.ವಿ.ಡಿ.ಗೆ ಭರಣ ಮಾಡಿ, ಆನಂತರ ಅವುಗಳನ್ನು ಹೊನ್ನಾವರದ ಶ್ರೀರಾಮ ಸ್ಟೂಡಿಯೋದಲ್ಲಿ ಪ್ರಿಂಟ್ ಮಾಡಿಸಿ, ಫೋಟೊಗಳನ್ನು ಹಾಗೂ ಡಿ.ವಿ.ಡಿಯನ್ನು 65-ಬಿ ಪ್ರಮಾಣ ಪತ್ರದೊಂದಿಗೆ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ 65-ಬಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-59 ಎಂದು, ಸಾಕ್ಷಿಯ ಸಹಿಯನ್ನು ನಿಪಿ-59(ಎ) ಎಂದು ಗುರುತಿಸಲಾಯಿತು. ಆರೋಪಿಯಿಂದ ವಶಪಡಿಸಿಕೊಂಡ ಚಾಕು ಮತ್ತು ಆತನ ಲುಂಗಿ ಹಾಗೂ ಅವುಗಳನ್ನು ಇಟ್ಟಂತಹ ಒಂದು ಕವರನ್ನು ಜಪ್ತುಪಡಿಸುವ ಕಾಲಕ್ಕೆ ತೆಗೆದ ಫೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-5, 6 ಮತ್ತು 7 ಎಂದು ಗುರುತಿಸಲಾಗಿದ್ದು, ಅದಕ್ಕೆ ಸಂಬಂಧಿಸಿದ ಡಿ.ವಿ.ಡಿ.ಯನ್ನು ನಿಪಿ-60 ಎಂದು ಗುರುತಿಸಲಾಯಿತು.

6. ಸಾಕ್ಷಿದಾರರಾದ ಚಾಸಾ-14 ರವರ ಮನೆಯ ಕಂಪೌಂಡಿನಲ್ಲಿ ಬಟ್ಟೆ ತೊಳೆಯುವ ಸ್ಥಳದಲ್ಲಿ ಮಾಡಿದ ಪಂಚನಾಮೆ ಕಾಲಕ್ಕೆ ತೆಗೆದ ಫೋಟೊಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-25 ಮತ್ತು 26 ಎಂದು ಗುರುತಿಸಲಾಗಿದ್ದು, ಅದಕ್ಕೆ ಸಂಬಂಧಿಸಿದ ಡಿ.ವಿ.ಡಿ.ಯನ್ನು ನಿಪಿ-61 ಎಂದು ಗುರುತಿಸಲಾಯಿತು. ಮೃತನ ಬಟ್ಟೆಗಳನ್ನು ಜಪ್ತುಪಡಿಸುವ ಕಾಲಕ್ಕೆ ತೆಗೆದ ಫೋಟೊಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-37, 38 ಮತ್ತು 39 ಎಂದು ಗುರುತಿಸಲಾಗಿದ್ದು, ಅದಕ್ಕೆ ಸಂಬಂಧಿಸಿದ ಡಿ.ವಿ.ಡಿ.ಯನ್ನು ನಿಪಿ-62 ಎಂದು ಗುರುತಿಸಲಾಯಿತು.

7. ದಿ.05-05-2021 ರಂದು ಹೊನ್ನಾವರದ ವೃತ್ತ ಕಚೇರಿಯಲ್ಲಿ ಚಾಸಾ-10 ಅಜರುದ್ದೀನ್ ರವರು ತಮ್ಮ ಮೊಬೈಲಿನಲ್ಲಿ ತೆಗೆದ ವೀಡಿಯೋವನ್ನು ತೆಗೆದ ಸಂಬಂಧ ಮೊಬೈಲನ್ನು ಜಪ್ತುಪಡಿಸುವ ಕಾಲಕ್ಕೆ ತನಿಖಾಧಿಕಾರಿಯ ಸೂಚನೆಯಂತೆ ಠಾಣೆಯ ಕ್ಯಾಮೆರಾದಿಂದ ಫೋಟೊ ತೆಗೆದಿರುತ್ತೇನೆ. ಮೊಬೈಲಿನಲ್ಲಿದ್ದ ವೀಡಿಯೋ ದೃಶ್ಯಗಳನ್ನ ಸ್ಕ್ರೀನ್ ಶಾಟ್ ಮಾಡಿದ್ದು, ಅದನ್ನು ಕಂಪ್ಯೂಟರಿಗೆ ಅಳವಡಿಸಿ, ಅವುಗಳನ್ನು ಡಿ.ವಿ.ಡಿ. ಗೆ ವರ್ಗಾಯಿಸಿರುತ್ತೇನೆ. ಆನಂತರ ಮೃತ ಅಬುತಾಲೀಬ್‌ನ ಭಾವಚಿತ್ರವನ್ನು ಆತನ ಸ್ನೇಹಿತ ಚಾಸಾ-18 ಕಲಿಮುದ್ದೀನ್ ರವರು ಹಾಜರುಪಡಿಸಿದ್ದು, ಅದನ್ನು ಜಪ್ತುಪಡಿಸಿಕೊಳ್ಳುವ ಕಾಲಕ್ಕೆ ತನಿಖಾಧಿಕಾರಿಯು ಸೂಚನೆಯಂತೆ ಠಾಣೆಯ ಕ್ಯಾಮೆರಾದಿಂದ ಫೋಟೊ ತೆಗೆಯಲಾಯಿತು. ಮೇಲೆ ಹೇಳಿದಂತೆ ತೆಗೆದ ಫೋಟೊಗಳನ್ನು ಕಂಪ್ಯೂಟರಿಗೆ ವರ್ಗಾಯಿಸಿ, ಡಿ.ವಿ.ಡಿ.ಗೆ ಭರಣ ಮಾಡಿ, ಫೋಟೊಗಳನ್ನು ಶ್ರೀರಾಮ ಸ್ಟೂಡಿಯೋದಲ್ಲಿ ಪ್ರಿಂಟ್ ಮಾಡಿಸಿ, ಫೋಟೊಗಳನ್ನು ಹಾಗೂ ಡಿ.ವಿ.ಡಿಯನ್ನು 65-ಬಿ ಪ್ರಮಾಣ ಪತ್ರದೊಂದಿಗೆ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ 65-ಬಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-63 ಎಂದು, ಸಾಕ್ಷಿಯ ಸಹಿಯನ್ನು ನಿಪಿ-63(ಎ) ಎಂದು ಗುರುತಿಸಲಾಯಿತು. ಚಾಸಾ-10 ರವರು ಮೊಬೈಲ್ ಹಾಜರುಪಡಿಸುವ ಕಾಲಕ್ಕೆ ತೆಗೆದ ಫೋಟೊಗಳನ್ನು ಈಗಾಗಲೇ ನಿಪಿ-16 ಎಂದು ಗುರುತಿಸಲಾಗಿದೆ. ಅದಕ್ಕೆ ಸಂಬಂಧಿಸಿದ ಡಿ.ವಿ.ಡಿಯನ್ನು ನಿಪಿ-64 ಎಂದು ಗುರುತಿಸಲಾಯಿತು. ಸ್ಕ್ರೀನ್ ಶಾಟ್ ಗಳನ್ನು ಭರಣ ಮಾಡಿದ ಡಿ.ವಿ.ಡಿ. ಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-65 ಎಂದು ಗುರುತಿಸಲಾಯಿತು. ಮೃತನ ಭಾವಚಿತ್ರ ಜಪ್ತುಪಡಿಸಿಕೊಳ್ಳುವ ಕಾಲಕ್ಕೆ ತೆಗೆದ ಫೋಟೊವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-43 ಎಂದು ಗುರುತಿಸಲಾಗಿರುತ್ತದೆ. ಅದಕ್ಕೆ ಸಂಬಂಧಿಸಿದ ಡಿ.ವಿ.ಡಿ. ಯನ್ನು ನಿಪಿ-66 ಎಂದು ಗುರುತಿಸಲಾಯಿತು.

8. ದಿ.04-06-2021 ರಂದು ಹೊನ್ನಾವರದ ವೃತ್ತ ಕಚೇರಿಯಲ್ಲಿ ಸಾಕ್ಷಿದಾರರಾದ ಚಾಸಾ-35 ರವರು ಠಾಣೆಯ ಕ್ಯಾಮೆರಾದಿಂದ ಸಾಕ್ಷಿದಾರರಾದ ಚಾಸಾ-11, 12 ಮತ್ತು ಆರೋಪಿಯ ತೆಗೆದ ಫೋಟೊಗಳನ್ನು ಪ್ರಿಂಟ್ ಮಾಡಿಸಿ, ನಂತರ ಅವುಗಳನ್ನು ತನಿಖಾಧಿಕಾರಿಯ ಮುಂದೆ ಹಾಜುರಪಡಿಸಿದ್ದು, ತನಿಖಾಧಿಕಾರಿಯು ಅವುಗಳನ್ನು ಜಪ್ತುಪಡಿಸಿಕೊಳ್ಳುವ ಕಾಲಕ್ಕೆ ತನಿಖಾಧಿಕಾರಿಯ ಸೂಚನೆಯಂತೆ ಠಾಣೆಯ ಕ್ಯಾಮೆರಾದಿಂದ

ಫೋಟೋಗಳನ್ನು ತೆಗೆದು, ಅದನ್ನು ಕಂಪ್ಯೂಟರಿಗೆ ವರ್ಗಾಯಿಸಿ, ಡಿ.ವಿ.ಡಿ.ಗೆ ಭರಣ ಮಾಡಿ, ನಂತರ ಅವುಗಳನ್ನು ಶ್ರೀರಾಮ ಸ್ಟೂಡಿಯೋದಲ್ಲಿ ಪ್ರಿಂಟ್ ಮಾಡಿಸಿ, ಫೋಟೋಗಳನ್ನು ಹಾಗೂ ಡಿ.ವಿ.ಡಿಯನ್ನು 65–ಬಿ ಪ್ರಮಾಣ ಪತ್ರದೊಂದಿಗೆ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ 65–ಬಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–67 ಎಂದು, ಸಾಕ್ಷಿಯ ಸಹಿಯನ್ನು ನಿಪಿ–67(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಸಮಯದಲ್ಲಿ ತೆಗೆದ ಫೋಟೋಗಳನ್ನು ಈಗಾಗಲೇ ನಿಪಿ–47, 48 ಮತ್ತು 49 ಎಂದು ಗುರುತಿಸಲಾಗಿದೆ. ಡಿ.ವಿ.ಡಿ. ಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–68 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ ರವರಿಂದಃ–**

ಆರೋಪಿ ಪರ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ